ಸಿಹಿ, ಖುಷಿ ಹಾಗೂ ಧನಾತ್ಮಕ ವಿಚಾರಗಳನ್ನಷ್ಟೇ ಓದುಗರೊಂದಿಗೆ ಹಂಚಿಕೊಳ್ಳುವ ತೀರ್ಮಾನದೊಂದಿಗೆ 'ಸುಧಾ' 2022ರ ಮೊದಲ ಸಂಚಿಕೆ ರೂಪುಗೊಂಡಿದೆ. ಸಿಹಿ–ಸಂಭ್ರಮ ಎಂದಮಾತ್ರಕ್ಕೆ, ಈ ಸಂಚಿಕೆಯ ಬರಹಗಳು ವಾಸ್ತವಕ್ಕೆ ಬೆನ್ನುಹಾಕಿವೆ ಎಂದರ್ಥವಲ್ಲ. ವರ್ತಮಾನದ ಕಹಿ ಘಟನೆಗಳನ್ನು ಮರೆಯದೆ, ಸಮಸ್ಯೆ–ಸವಾಲುಗಳ ಜೊತೆಗೇ ಬದುಕನ್ನು ದಿಟ್ಟತನದಿಂದ, ಸಮಚಿತ್ತದಿಂದ ಹಾಗೂ ಸೃಜನಶೀಲವಾಗಿ ಎದುರಿಸಬೇಕೆನ್ನುವ ನಂಬಿಕೆ ಈ ಸಂಚಿಕೆಯ ಬರಹಗಳನ್ನು ರೂಪಿಸಿದೆ. ಈ ಪ್ರಯತ್ನದ ಭಾಗವಾಗಿ ಎರಡು ವಿಶಿಷ್ಟ ಪತ್ರಗಳು ಸಂಚಿಕೆಯ ಅಗ್ರಬರಹಗಳಾಗಿ ನಿಮ್ಮ ಓದಿಗೆ ತೆರೆದುಕೊಳ್ಳುತ್ತಿವೆ. ಮೊದಲನೆಯದು, ಅಮೆರಿಕದಲ್ಲಿ ನೆಲೆಸಿರುವ ಕನ್ನಡದ ಕವಯಿತ್ರಿಯೊಬ್ಬರು ಹೊಸ ವರ್ಷಕ್ಕೆ ಬರೆದಿರುವ ಆಪ್ತ ಪತ್ರ. ಮತ್ತೊಂದು ಕಾಗದ ಬಂದಿರುವುದು ವ್ಯಕ್ತಿಯಿಂದಲ್ಲ, ಪ್ರಕೃತಿಯಿಂದ – 2022 ಹೆಸರಿನ ಅರಳುಕಂಗಳ ಹೊಸ ವರ್ಷದಿಂದ. ಇವೆರಡು ಪತ್ರಗಳ ಓದು, ಹೊಸ ವರ್ಷದ ಸಂತಸವನ್ನು ಹನ್ನೆರಡೂ ತಿಂಗಳು ಉಳಿಸಿಕೊಳ್ಳಲು ಬೇಕಾದ ಕೆಲವು ಅರ್ಥಪೂರ್ಣ ಸಾಧ್ಯತೆಗಳ ಬಗ್ಗೆ ಯೋಚಿಸಲು ನಮ್ಮನ್ನು ಪ್ರೇರೇಪಿಸುವಂತಿದೆ.

# 2022 ಓನ್ಲಿ ಖುಷಿ... ಬೇರೇನಿಲ್ಲ

